

# ಕೊಡವೂರಿನ ಒಡಲಲ್ಲಿ ಸಂಬಂಧ–ಸಂಘರ್ಷದ ಚಿತ್ತಾರಗಳು

1

ಕೊಡವೂರು ಪ್ರಕೃತಿಯ ಮಡಿಲು. ಸುತ್ತಲೂ ಕಾಫಿ ತೋಟ, ನಡುನಡುವೆ ಎದ್ದು ನಿಂತು ಕಾಫಿ ಗಿಡಗಳ ಕಡೆಗೆ ನೆರಳಿನ ಕೃಪಾದೃಷ್ಟಿ ಬೀರುವ ಕಿತ್ತಳೆ, ನೇರಳೆ, ಹೊಂಗೆ ಇತ್ಯಾದಿ ಮರಗಳು, ಹಿನ್ನೆಲೆಯಲ್ಲಿ ದಿಗಂತದ ಅಂಚಾಗಿ ಕಾಣಿಸುವ ಕರಿಮಾಯಿ ಗುಡ್ಡ ಹಾಗೂ ನೀಳಕ್ಕೆ ಚಾಚಿದ ಬೆಟ್ಟಸಾಲುಗಳು, ಅಲ್ಲಲ್ಲಿ ದಟ್ಟ ನೀಲಿಮೆ; ಅಲ್ಲಲ್ಲಿ ದಟ್ಟ ಹಸುರು. ಮೋಡಗಳಿಗೆ ಆಶ್ರಯ ಕೊಟ್ಟು ಹೆಮ್ಮೆಯಿಂದ ವಿಜೃಂಭಿಸುವ ಬೋಳುಗುಡ್ಡಗಳು, ಸುಳಿಸುಳಿದು ಸಾಗುವ ತಂಪು ಹವೆ. ದಾರಿಯೊಂದು ಕೊಡವೂರನ್ನು ಸೀಳಿ ಹಾಯುತ್ತಿದ್ದು ವೀರನಗರವನ್ನು ಹಿಂದೆ ಬಿಟ್ಟು ಮುಂದೆ ಸಾಗುತ್ತ ಮೈಸೂರಿನಲ್ಲಿ ಲಯವಾಗಿಬಿಡುತ್ತದೆ.

ಕೊಡವೂರು ಈ ಎರಡು ಕಡೆ ಸಾಗುವ ಮಂದಿಗೆ ಸಾಕ್ಷಿ ಹೇಳುವ ಒಂದು ಪುಟ್ಟ ಹಳ್ಳಿ. ಒಂದೆರಡು ಗೂಡಂಗಡಿಗಳು, ಸೇಂದಿ ಅಂಗಡಿ, ಚಾದಂಗಡಿ ಹಾಗೂ ಒಂದು 'ಸೋಮಾರಿಕಟ್ಟೆ'ಯನ್ನು ಹೊರತುಪಡಿಸಿದರೆ ಪೇಟೆಯ ಲಕ್ಷಣವೇನು ಕೊಡವೂರಿಗೆ ಇದ್ದಂತಿಲ್ಲ. ಅದೇನಿದ್ದರೂ ಮೈಸೂರಿಗೆ ಮುಖ ಮಾಡಿದರೆ ಮೂರು ಕಿಲೋಮೀಟರ್ ಹಿಂದಿರುವ ವೀರನಗರಕ್ಕೇ ಸಲ್ಲುವ ವಿಚಾರ. ಕೊಡವೂರಿನ ಎಸ್ಟೇಟಿನ ದುಡಿಮೆಗಾರರು ಸಾಯಂಕಾಲಗಳಲ್ಲಿ ಚಾ ಕುಡಿಯುವುದಕ್ಕೋ ಬೀಡಿ ಸೇದುವುದಕ್ಕೋ ಸೇಂದಿಗೂ ಅಂಗಡಿ ಬದಿಗೆ ಬಂದಾಗ ಮಾತ್ರ ಅಂಗಡಿಗಳು ಚುರುಕಾಗುತ್ತಿದ್ದುವು.

ಅಲ್ಲದಿದ್ದರೆ ನಾಲ್ಕಾರು ಸೋಮಾರಿಗಳು 'ಕಟ್ಟೆ'ಯಲ್ಲಿ ಕುಳಿತು ಇಸ್ಪೀಟು ಆಡುತ್ತಾ, ಬೀಡಿ ಸೇದುತ್ತಾ ಕಾಲಹರಣ ಮಾಡುತ್ತಿದ್ದುದರ ಹೊರತಾಗಿ ಕೊಡವೂರಿನ ಅಂಗಡಿಗಳಿಗೆ ಅಂಥ ಜೀವಂತಿಕೆಯೇನೂ ಇರಲಿಲ್ಲ. ಆಗೊಮ್ಮೆ ಈಗೊಮ್ಮೆ ಕಾರುಗಳೋ ಬಸ್ಸುಗಳೋ ದಾಟಿ ಹೋದಾಗ ಅವುಗಳಲ್ಲಿ ಕೂತ ಮಂದಿಯ ಕಡೆಗೊಮ್ಮೆ ಇಣುಕು ಹಾಕುವುದು, ಅವರ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವುದು ಕಟ್ಟೆಯ ಸೋಮಾರಿಗಳಿಗೆ ಪರಿಪಾಟವಾಗಿತ್ತು. ಹಾಗೊಮ್ಮೆ ನಾಲ್ಕಾರು ಸೋಮಾರಿಗಳು ಕಟ್ಟೆಯಲ್ಲಿ ಕುಳಿತು ಇಸ್ಪೀಟು ಆಡುತ್ತಾ ಯಾವುದೋ ಕಾರಣಕ್ಕೆ ಗಾಳಿಯಲ್ಲಿ ಗುದ್ದಾಡುತ್ತಿದ್ದಾಗಲೇ ಪ್ರೊ. ಭಾಸ್ಕರರ ಕಾರಿನ ಹಾರ್ನ್ ಸದ್ದು ಮಾಡಿದ್ದು. ಬಾಯಿಯ ಜಗಳದಲ್ಲಿ ತೊಡಗಿದ್ದ ದೀಪೂ ಕೈಯಲ್ಲಿದ್ದ ಇಸ್ಪೀಟನ್ನು ಅಲ್ಲೇ ಕುಳಿತವರ ಮುಖಕ್ಕೆ ಚೆಲ್ಲಿ ಎದ್ದು ಕಾರಿನ ಬಳಿ ಓಡಿ ಬಂದ.

'ಏನು ಬೇಕು ಸಾರ್?'

'ಸಿಗರೇಟ್ಸ್ ಇವೆಯಾ?'

'ತ್ರಿಬಲ್ ಫೈವ್‌ನಾ ಸಾರ್, ಫಿಲ್ಟರ್ ಸಿಗರೇಟ್ ಯಾವೂದೂ ಇಲ್ವಲ್ಲ ಸಾರ್. ಚಾರ್‌ಮಿನಾರ್ ಸಾರ್, ಎರಡೇ ಸಾರ್...' ದೀಪೂ ದಡಬಡಿಸಿದ.

'ಚಾರ್‌ಮಿನಾರ್ ಕೊಡು, ಐದು ಪ್ಯಾಕ್'.

'ಐದು ಪ್ಯಾಕಾ ಸಾರ್? ಅಷ್ಟಿರ್ಲಿಕ್ಕಿಲ್ಲ. ಕೇಳಿ ನೋಡ್ತೇನೆ, ಚೇಟಾ, ಐದು ಪ್ಯಾಕ್ ಚಾರ್‌ಮಿನಾರ್ ಇದೆಯಾ?' – ಗಡಿಯ ಒಳಗಿದ್ದಾತನನ್ನು ದೀಪೂ ಕೂಗಿ ಕೇಳಿದ.

ಅಂಗಡಿಯಾತ 'ಮೂರೇ ಪ್ಯಾಕ್ ಇದೆ' ಎಂದ.

ದೀಪೂ ಓಡಿ ಬಂದು ಅಂಗಡಿಯಿಂದ ಸಿಗರೇಟೆತ್ತಿ ಗಿರಾಕಿಯ ಕಡೆಗೊಮ್ಮೆ ನೋಡುತ್ತಾ, 'ಇವರು ಚಾರ್‌ಮಿನಾರ್ ಸೇದ್ತಾರಾ? ಭಾರೀ ತಲೆ ಚೂಡಿನ ವ್ಯಕ್ತಿ ಇರಬೇಕು' ಎಂದುಕೊಂಡು ಅವರ ಕೈಗಿತ್ತ. ಪ್ರೊ. ಭಾಸ್ಕರ್ ಕೊಟ್ಟ ದುಡ್ಡನ್ನು ಅಂಗಡಿಯಾತನಿಗೆ ರವಾನಿಸುವ ಸಂದರ್ಭ ಬಳಸಿ ಮಾಮೂಲಾಗಿಯೇ 'ಇನ್ನೇನು ಬೇಕು ಸಾರ್?' ಅಂತ ದೀಪೂ ವಿಚಾರಿಸಿದ. 'ಏನೂ ಬೇಡ' ಎನ್ನುತ್ತಾ ಒಂದು ಸಿಗರೇಟಿಗೆ ಕಡ್ಡಿ ಗೀರಿ, ಕಾರು ಸ್ಟಾರ್ಟ್ ಮಾಡಿದರು.

'ಸಾರ್, ಸಾರ್, ಯಾವ ಕಡೆ ಹೋಗ್ತೀರಿ ಸಾರ್' ಎನ್ನುತ್ತಿದ್ದಂತೆಯೇ ಕಾರು ಹೊರಟದ್ದು ಕಂಡು, ಎಂಥವರಪ್ಪಾ ಇವರು? ಕೇಳಿದ್ದಕ್ಕೆ ಉತ್ತರಿಸುತ್ತಿದ್ರೆ ಇವರ ಗಂಟೇನು ಹೋಗುತ್ತಿತ್ತು? ಎಂದು ಮನದಲ್ಲೆ ಹಲುಬುತ್ತಾ ಅವರು ಕೊಟ್ಟುಹೋದ ಉಳಿಕೆ ಹಣವನ್ನು ತಾನಿಟ್ಟುಕೊಳ್ಳಲೇ ಅಂಗಡಿಯಾತನಿಗೆ ಕೊಡಲೇ ಎಂದು ಗೊಂದಲಗೊಳ್ಳುತ್ತಿದ್ದಂತೆಯೇ ಅಂಗಡಿಯಾತ ಕರೆದ. ಕಾರು ನೇರವಾಗಿ ವೀರನಗರದ ಕಾಫಿ ರಿಸರ್ಚ್ ಸೆಂಟರ್‌ಗೆ ಹೋಯಿತು. ಅಟೆಂಡರ್ ಕೈಯಲ್ಲಿ ವಿಸಿಟಿಂಗ್ ಕಾರ್ಡು ಕೊಟ್ಟು ಹೊರಗಡೆ ಹೂಗಿಡಗಳ ಅಂದ ಸವಿಯುತ್ತ ಮತ್ತೊಂದು ಸಿಗರೇಟಿಗೆ ಬೆಂಕಿಹಚ್ಚಿ ಪ್ರೊ. ಭಾಸ್ಕರ್ ಸರದಿ ಕಾದರು. ತಕ್ಷಣ ಕರೆ ಬಂತು. ಹಚ್ಚಿದ್ದ ಸಿಗರೇಟಿಗೆ ಒಂದು ದಮ್ಮಷ್ಟೇ ಗತಿಯೆಂದುಕೊಂಡು ಅದನ್ನು ಭೂತಾಯಿಯ ಮಡಿಲಿಗೆ ಸೇರಿಸಿ, ನಿರ್ದೇಶಕರ ಚೇಂಬರಿಗೆ ನುಗ್ಗಿದರು.

'ಬನ್ನಿ ಪ್ರೊ. ಭಾಸ್ಕರ್, ಬಹಳ ಸಂತೋಷ, ನಿಮ್ಮನ್ನೇ ಎದುರು ನೋಡ್ತಾ ಇದ್ದೆ' ಸಂಸ್ಥೆಯ ಆಡಳಿತ ನಿರ್ದೇಶಕ ಡಾ. ಚೆಂಗಪ್ಪ ಹೇಳಿದರು. ಅವರೆದುರು ಕುಳಿತಿದ್ದ ಇನ್ನೊಬ್ಬ ವ್ಯಕ್ತಿಯನ್ನು ಕಂಡು ಸ್ವಲ್ಪ ಇರಿಸುಮುರಿಸು ತೋರಿಸಿದ ಪ್ರೊ. ಭಾಸ್ಕರ್‌ರಿಗೆ, 'ಇವರು ಪ್ಲಾಂಟರ್